ರಾಜ್ಯೋತ್ಸವದಲ್ಲಿ ನಿವೃತ್ತ ಮುಖ್ಯಶಿಕ್ಷಕ ಶ್ರೀರಂಗ ಜೋಷಿ ಅಭಿಮತ

# ಕನ್ನಡ ಭಾಷೆಯಲ್ಲ; ನಮ್ಮೊಳಗಿನ ಸಂಸ್ಕೃತಿ

ಪ್ರಜಾವಾಣಿ ವಾರ್ತೆ

**ಕಾರ್ಕಳ:** 'ಕನ್ನಡ ಕೇವಲ ಭಾಷೆಯಲ್ಲ, ನಮ್ಮೊಳಗಿನ ಸಂಸ್ಕೃತಿ' ಎಂದು ನಿವೃತ್ತ ಮುಖ್ಯಶಿಕ್ಷಕ ಶ್ರೀರಂಗ ಜೋಷಿ ತಿಳಿಸಿದರು.

ನಗರದ ಮಂಜುನಾಥ ಪೈ ಸ್ಮಾರಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಕಾಲೇಜಿನ ವಿದ್ಯಾರ್ಥಿ ವೇದಿಕೆ ಹಾಗೂ ಸಾಹಿತ್ಯ ಸಂಘ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ನಮ್ಮೆಲ್ಲರ ಮನೆ, ಊರಿನ ಹಬ್ಬ ಹರಿದಿನಗಳಲ್ಲಿ ಪರಂಪರೆಯಾಗಿ ಬೆಳೆದುಕೊಂಡು ಬಂದದ್ದು ಕನ್ನಡ ಭಾಷೆ. ಕನ್ನಡ ಭಾಷೆ, ಸಂಸ್ಕೃತಿ ಹಾಗೂ ಪರಂಪರೆ ನಮ್ಮ ಮಕ್ಕಳ ಭವಿಷ್ಯವಾಗಬೇಕು. ಆಂಗ್ಲ ಶಿಕ್ಷಣ ವ್ಯವಸ್ಥೆ ಕಡೆಗಿನ ಒಲವು, ಇಂದು ನಮ್ಮ ಪೋಷಕರನ್ನು ಬದಲಾಯಿಸುತ್ತಿದೆ. ಕನ್ನಡ ಮಾಧ್ಯಮದಲ್ಲಿ ಕಲಿತ ಮಕ್ಕಳು ಮುಂದೆ ಕ್ರಿಯಾತ್ಮಕವಾಗಿ ತಮ್ಮನ್ನು ಎಲ್ಲ ಕಡೆಗಳಲ್ಲಿ ಸ್ಫೂರ್ತಿಯಿಂದ, ಸ್ವಯಂ ಪ್ರೇರಣೆಯಿಂದ ತೊಡಗಿಸಿಕೊಳ್ಳುತ್ತಾರೆ.

## ಮುಖ್ಯಾಂಶಗಳು

- ಕನ್ನಡ ಪರಂಪರೆಯನ್ನು ಮುಂದುವರಿಸುವ ಕೆಲಸ ಆಗಬೇಕು
- ಆಂಗ್ಲ ಭಾಷೆಯ ಮೋಹದ ಜತೆಗೆ ಕನ್ನಡತನವನ್ನೂ ಉಳಿಸಿಕೊಳ್ಳಬೇಕು
- ಕನ್ನಡ ಮಾಧ್ಯಮದಲ್ಲಿ ಕಲಿತ ವಿದ್ಯಾರ್ಥಿಗಳು ಕ್ರಿಯಾತ್ಮಕವಾಗಿ ಯೋಚಿಸಬಲ್ಲರು

ಇಂತಹ ಸಂಸ್ಕೃತಿ ಆಂಗ್ಲ ಮಾಧ್ಯಮದಲ್ಲಿ ಕಲಿತ ವಿದ್ಯಾರ್ಥಿಗಳಲ್ಲಿ ಕಾಣುವುದಿಲ್ಲ. ಇದು ನಮ್ಮ ನಿಮ್ಮೆಲ್ಲರ ಇಂದಿನ ಸಮಾಜ. ಒಟ್ಟು ವ್ಯವಸ್ಥೆಗಳ ಮಧ್ಯ ನಾವು ನಮ್ಮ ಮಕ್ಕಳನ್ನು ವೃತ್ತಿ ಪೂರಕವಾಗಿ ಬೆಳೆಸುತ್ತಿದ್ದೇವೆ, ಕನ್ನಡ ಪರಂಪರೆಯನ್ನು ಮುಂದುವರೆಸುವ ಕೆಲಸ ನಡೆಯಬೇಕು' ಎಂದರು.

ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ವರದರಾಜ ಚಂದ್ರಗಿರಿ ಪ್ರಾಸ್ತಾವಿಕವಾಗಿ ಮಾತನಾಡಿ, 'ನಮ್ಮ ಮನೆಗಳಲ್ಲಿ ಹೇಗೆ ಇಂಗ್ಲಿಷ್ ಭಾಷೆಯಿಂದ ನಮ್ಮ ಕನ್ನಡ ಪದಗಳು ಕಳೆದು ಹೋಗುತ್ತಿವೆ ಎಂಬುದನ್ನು ಉದಾಹರಣೆ ಸಹಿತ ವಿವರಿಸಿದರು. ನಮ್ಮ ಪಾರಂಪರಿಕ ಪದಗಳೊಂದಿಗೆ ನಮ್ಮ ಇಡೀ ಸಂಸ್ಕೃತಿ ಬೆರತುಕೊಂಡಿದೆ. ಇದು ಮುಂದುವರಿದುಕೊಂಡು ಹೋಗಬೇಕು. ಆಂಗ್ಲಭಾಷೆಯನ್ನು ಬಿಟ್ಟು ಬದುಕಲು ಇಂದಿನ ತಾಂತ್ರಿಕ ಯುಗದಲ್ಲಿ ಅಸಾಧ್ಯ. ಆದರ ಜೊತೆಯಲ್ಲಿ ನಾವು ನಮ್ಮ ಭಾಷೆಯನ್ನು ಬಳಸುತ್ತಾ ಬೆಳಸಬೇಕು' ಎಂದರು.

ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀವರ್ಮ ಅಜ್ರಿ ಅಧ್ಯಕ್ಷತೆ ವಹಿಸಿದ್ದರು. ಸುಷ್ಮಾ ಡಿಸೋಜ ವಂದಿಸಿದರು. ವಿದ್ಯಾರ್ಥಿನಿ ಅಕ್ಷತಾ ನಿರೂಪಿಸಿದರು. ಕಾಲೇಜಿನ ಎಂಕಾಂ ವಿದ್ಯಾರ್ಥಿಗಳು ಕನ್ನಡ ಗೀತೆಗಳನ್ನು ಹಾಡಿ, ನೃತ್ಯ ಕಾರ್ಯಕ್ರಮ ನಡೆಸಿಕೊಟ್ಟರು




ಕಾರ್ಕಳದ ಮಂಜುನಾಥ ಪೈ ಸ್ಮಾರಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಕಾಲೇಜಿನ ವಿದ್ಯಾರ್ಥಿ ವೇದಿಕೆ ಹಾಗೂ ಸಾಹಿತ್ಯ ಸಂಘ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ನಿವೃತ್ತ ಮುಖ್ಯಶಿಕ್ಷಕ ಶ್ರೀರಂಗ ಜೋಷಿ ಮಾತನಾಡಿದರು.